ಭಿನ್ನವಾಗಿರುತ್ತವೆ. ಮೌಲ್ಯಗಳು ಪಲ್ಲಟಗೊಂಡ ಆಧುನಿಕ ವ್ಯವಸ್ಥೆಯಲ್ಲಿ ಯುವಜನ ತಮ್ಮದೇ ಮೌಲ್ಯಗಳಿಗೆ, ಸ್ವ-ಅಭಿವ್ಯಕ್ತಿಗೆ ಮತ್ತು ಬದುಕಿನ ಮುಕ್ತ ದಾರಿಗೆ ಹೆಚ್ಚು ಗಮನ ಕೊಡುತ್ತಾರೆ. ಅದು ಸಮಾಜದೊಳಗಿನ ಹಳೆಯ ಸಾಮೂಹಿಕ, ಪಾರಂಪರಿಕ ಮೌಲ್ಯಗಳಿಗೆ ಸವಾಲಾಗಿ ನಿಲ್ಲುತ್ತದೆ. ಪರಿಣಾಮವಾಗಿ ಹೊಸ ಬಗೆಯ ವೈರುಧ್ಯಗಳು ಮತ್ತು ಸಂಘರ್ಷಗಳು ಎದುರಾಗುತ್ತವೆ.ಜನ ಬಿಡಿಸಿಕೊಳ್ಳಲಾಗದ ಬಿಕ್ಕಟ್ಟಿನೊಳಗೆ ಸಿಲುಕಿಕೊಳ್ಳುತ್ತಾರೆ.

◆ **ಕೊನೆಯದಾಗಿ ಕೇಳುವೆ. ನಾನು ಬರೆಯೋದು ಕನ್ನಡ ಭಾಷೆಯಲ್ಲಿ, ನೀವು ಬರೆಯುತ್ತಿರುವುದು ಚೈನೀಸ್ ನುಡಿಯಲ್ಲಿ... ನಮ್ಮಿಬ್ಬರಿಗೂ ಸಂವಹನ ಮಾಧ್ಯಮವಾಗಿ ಒದಗಿದ್ದು ಹರುಕು ಮುರುಕು ಇಂಗ್ಲಿಷ್. ಇಷ್ಟೆಲ್ಲಾ ಅಡೆತಡೆಗಳನ್ನು ದಾಟಿಕೊಂಡು, ಯಾವ ಒಂದು ಮಾನವೀಯ ಎಳೆ ನಮ್ಮನ್ನು ಬೆಸೆಯುತ್ತಿದೆ, ಪರಸ್ಪರ ಇನ್ನಷ್ಟು ಹತ್ತಿರಕ್ಕೆ ತರುತ್ತಿದೆ?**

ನೀವು ಕೇಳಿದ ಪ್ರಶ್ನೆ ಮನುಷ್ಯನ ಬೇಸಿಕ್ ಮೌಲ್ಯಗಳು ಮತ್ತು ಸಾಮರಸ್ಯದ ಮೇಲೆ ಆಧಾರಿತವಾಗಿದೆ. ಈ ವಿಶ್ವದಲ್ಲಿ ನಮ್ಮ ಅಸ್ತಿತ್ವವು ಎಷ್ಟು ಚಿಕ್ಕದೆಂದರೆ, ಇದುವೇ ನಮ್ಮನ್ನ ಒಬ್ಬರನ್ನೊಬ್ಬರು ಮತ್ತೆ ಮತ್ತೆ ನೋಡಿಕೊಳ್ಳವಂತೆ ಮತ್ತು ಅರ್ಥಮಾಡಿಕೊಳ್ಳುವಂತೆ ಮಾಡುತ್ತದೆ. ಯಾಕೆಂದರೆ ಕೇವಲ 'ಸಂಪರ್ಕ' ಮಾತ್ರ ಈ ಪ್ರಪಂಚದಲ್ಲಿನ ಎಲ್ಲಾ ಬಗೆಯ ಕ್ರೌರ್ಯ ಮತ್ತು ನೋವಿನ ವಿರುದ್ಧ ಶಕ್ತಿ-ಸಾಮರ್ಥ್ಯವನ್ನ ಹುಟ್ಟಿಸಬಲ್ಲುದು; ಒಟ್ಟುಗೂಡಿಸಬಲ್ಲದು. 'ಸಂಪರ್ಕ' ಸಾಧಿಸ ಬಯಸುವ ಈ ಆದಿಮ ಮಾನವೀಯ ಹಂಬಲ ಮಾತ್ರ ಮನುಷ್ಯ ಪ್ರಜ್ಞೆಯ ಜನ್ಮಸ್ಥಾನವೆಂದು ನಾನು ಕರೆಯಬಯಸುತ್ತೇನೆ. ಬಾಯಾರಿ ನೀರು ಕುಡಿದಾಗೊಮ್ಮೆ ಯಾರಿಗೆ ಖುಷಿಯಾಗಿತ್ತೋ ಅವನೇ ಸಹಜ ಮನುಷ್ಯ ಅಂತ ನಮಗೆ ಗೊತ್ತಾಗಬೇಕಿದೆ! ●

**ಯು ಯೌಯೌ**
**ಕವಿತೆಗಳು**

# ಎತ್ತರಕ್ಕೆ ಯಾವತ್ತೂ ಹೆದರಬೇಡ

ಸಿಗರೇಟು ತೆಗೆದುಕೊಂಡು ಹೋಗು
ಬಾಲ್ಕನಿಯಿಂದ ಜಿಗಿ
ಅಥವಾ
ಬಹುಮಹಡಿ ಕಟ್ಟಡದಿಂದ ಬಿದ್ದು
ಆತ್ಮಹತ್ಯೆ ಮಾಡಿಕೊಳ್ಳುವ
ಆಲೋಚನೆ ತೆಗೆದುಕೊಂಡು ಹೋಗು
ಮತ್ತೆ ಸೇದಲು ಸಿಗರೇಟು ಹೊರತೆಗಿ

ಎಲ್ಲರೂ ಹೇಳುವಂತೆ
ಅಷ್ಟೇನು ಎತ್ತರವಲ್ಲ ಐದನೇ ಮಹಡಿ
ಚಿಂತೆ ಬೇಡವೇ ಬೇಡ
ಬದುಕು ಎಷ್ಟೇ ಎತ್ತರಕೇರಿದರೂ
ಭಯಪಡುವ ಅಗತ್ಯವಿಲ್ಲ
ಏಕೆಂದರೆ ನೀನು
ನೆಲ ಮಹಡಿಯಲ್ಲಿ ಬಿದ್ದಮೇಲಷ್ಟೇ ಸಾಯುತ್ತೀಯ

ಖರೆ ಹೇಳಬೇಕೆಂದರೆ
ನನ್ನ ಜೀವನ ಬೊಂಬಾಟಾಗಿ ಸಾಗ್ತಾ ಇದೆ
ಪ್ರತಿದಿನ ನಾನು ನೆಲ ಮಹಡಿಯಲ್ಲಿ
ನನ್ನ ನೆರೆಹೊರೆಯವರಿಗೆ 'ಹಲೋ' ಹೇಳುತ್ತೇನೆ